ಅಧ್ಯಕ್ಷರು : ಈಗ ಖಾಸಗಿ ಕಾರ್ಯಕಲಾಪಗಳು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ ಕಾವೇರಿ ಜಲ ವಿವಾದದ ಬಗ್ಗೆ ಸುಪ್ರೀಂ ಕೋರ್ಟ್ ಮಾಡಿರುವ ಸಲಹೆಯನ್ನು ಸ್ವಾಗತಿಸುವುದು

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಅಧ್ಯಕ್ಷರೇ ತಮ್ಮ ಜೊತೆಯಲ್ಲಿ ನಾನು ಮಾತನಾಡುವಾಗ ಹೇಳಿದ್ದೆ ಇವತ್ತು ಈ ಸದನ ಮುಗಿದು ಮತ್ತೆ ಸೋಮವಾರ ಸೇರುತ್ತಿದೆ. ಮೂರು ದಿನಗಳ ಕಾಲ ಬಿಡುವು ಇರುತ್ತದೆ. ಆದ್ದರಿಂದ ಒಂದು ಮಹತ್ವದ ವಿಚಾರದ ಬಗ್ಗೆ ನಾನು ಸರ್ಕಾರದ ಗಮನವನ್ನು ತಮ್ಮ ಅಪ್ಪಣೆ ಕೋರಿ ಹೇಳುವುದಕ್ಕೆ ಬಯಸುತ್ತೇನೆ. ನಿನ್ನೆ ದಿವಸ ಸುಪ್ರೀಂ ಕೋರ್ಟಿನಲ್ಲಿ ಕಾವೇರಿ ಜಲ ವಿವಾದದ ಬಗ್ಗೆ ತಮಿಳುನಾಡು ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಎರಡೂ ಸರ್ಕಾರಗಳ ವಕೀಲರಿಗೆ ಸಂಧಾನದ ಮೂಲಕ ಅದನ್ನು ಬಗೆಹಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಮತ್ತು ಸಭಾನಾಯಕರಾಗಿ ಮುಖ್ಯಮಂತ್ರಿಯವರು ಇದನ್ನು ಸ್ವಾಗತ ಮಾಡಿದ್ದಾರೆ. ಈಗ ನಮ್ಮ ಜನತಾದಳದ ಪಕ್ಷದ ವತಿಯಿಂದ ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕ ಸಲಹೆ ಏನಿದೆ ಈ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈ ದೃಷ್ಟಿಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ರಾಜ್ಯದ ಜನತೆಯ ಗಮನಕ್ಕೆ ಸದನದ ಗಮನಕ್ಕೆ ತರಬೇಕು. ಸಾಧ್ಯವಾದರೆ ಇನ್ನೂ ಒಂದೂವರೆ ಎರಡು ಘಂಟೆಗಳ ಕಾಲ ಸಮಯ ಇದೆ. ಮಾನ್ಯ ಮುಖ್ಯಮಂತ್ರಿಗಳು ಸದನ ನಡೆಯತಕ್ಕ ಸಂದರ್ಭದಲ್ಲಿ ಸದನ ವಿಶ್ವಾಸ ತೆಗೆದುಕೊಂಡು ಏನು ಮಾಡಬೇಕು ಎಂದಿದ್ದಾರೆ ಅದರ ರಿಪರ್‌ಕೇಷನ್ಸ್ ಏನು ಎಂಬುದನ್ನು ಹೇಳಬೇಕು. ಇವತ್ತು ಬೆಳಗ್ಗೆ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿದ್ದಾರೆ ಎಂದು ಕೇಳಿದ್ದೇನೆ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕು. ನಮ್ಮ ಮಟ್ಟಿಗೆ ನಮ್ಮ ಪಕ್ಷದ ಮಟ್ಟಿಗೆ ಸುಪ್ರೀಂ ಕೋರ್ಟ್ ಕೊಟ್ಟಿರುವ ಸಲಹೆಯನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ ತಾವು ತಮ್ಮ ರಾಜಕೀಯ ಜೀವನದಲ್ಲಿ ಈ ರಾಜ್ಯದ ಪ್ರತಿಯೊಂದು ಸಮಸ್ಯೆಗಳ ಬಗ್ಗೆ ಯಾವತ್ತೂ ಕೂಡಾ ಸ್ಪಂದನೆ ಮಾಡಿದ್ದೀರಿ. ತಾವು ಈ ಸಭೆಯ ಅಧ್ಯಕ್ಷರಾಗಿದ್ದುಕೊಂಡು ಇದೇ ರೀತಿಯ ಒಂದು ಸಲಹೆ ಮಾಡಿದ್ದನ್ನು ಈ ಸಂದರ್ಭದಲ್ಲಿ ನಾನು ಜ್ಞಾಪಿಸಿಕೊಳ್ಳುತ್ತಿದ್ದೇನೆ. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳಿಗೆ ತಾವು ಏನೊಂದು ಸಲಹೆ ಕೊಟ್ಟಿದ್ದೀರಿ ಅದು ಶ್ಲಾಘನೀಯವಾದುದು ಇವತ್ತು ಸುಪ್ರಿಮ್ ಕೋರ್ಟ್ ಸಹಾ ಅದೇ ದೃಷ್ಟಿಯನ್ನಿಟ್ಟು ತಮ್ಮ ಸಲಹೆಯನ್ನು ಮುಂದಿಟ್ಟಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೋ ಎನ್ನುವುದರ ಬಗ್ಗೆ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ ಇನ್ನು ಎರಡು ಮೂರು ದಿವಸ ಸದನ ಸೇರುವುದಿಲ್ಲ. ಈಗ ಸರ್ಕಾರ ಏನು ಮಾಡಬೇಕೆಂದು ಹೊರಟಿದೆ ಒಂದು ಪವರ್ ಕಮಿಟಿ ಟೆಕ್ನಿಕಲ್ ಕಮಿಟಿ ಇದೆ. ಹೈಪವರ್ ಕಮಿಟಿಯಲ್ಲಿ ನಾವು ಸದಸ್ಯರಿದ್ದು ಅದರ ಸಭೆಯನ್ನು ನಾಳೆ ಅಥವಾ ನಾಳಿದ್ದು ಕರೆದು ನಮ್ಮಗಳ ವಿಶ್ವಾಸ ಪಡೆದುಕೊಂಡು ಕೆಲಸ ಮಾಡಬೇಕೆಂದಿದ್ದೀರಾ? ಅಥವಾ ಏನು ಮಾಡಬೇಕೆಂದಿದ್ದೀರಾ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ ಕಾವೇರಿ ಜನ ನೀತಿ ಬಗ್ಗೆ ಸುಪ್ರಿಮ್ ಕೋರ್ಟ್ ನವರು ಏನು ಸಲಹೆ ಇತ್ತಿದ್ದಾರೆ ಅದನ್ನು ನಾನು ಇಡೀ ರಾಜ್ಯದ ಜನತೆ ಪರವಾಗಿ ಸ್ವಾಗತಿಸುತ್ತೇನೆ. ಈ ಸಲಹೆ ಬಗ್ಗೆ

ರಾಜ್ಯದ ಮುಖ್ಯಮಂತ್ರಿಗಳೂ ತಮ್ಮ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ತಕ್ಷಣ ವಿರೋಧ ಪಕ್ಷಗಳ ಎಲ್ಲಾ ಮುಖಂಡರನ್ನು ಕರೆದು ಮುಂದೆ ಯಾವ ರೀತಿ ಹೆಜ್ಜೆ ಇಡಬೇಕೆನ್ನುವುದರ ಬಗ್ಗೆ ಸಮಾಲೋಚನೆ ಮಾಡತಕ್ಕದ್ದು ಸರ್ಕಾರದಿಂದ ಅತಿ ಮುಖ್ಯವಾಗಿ ಆಗಬೇಕಾದ ಜವಾಬ್ದಾರಿಯುತವಾದ ಕೆಲಸ. ಬೆಳಿಗ್ಗೆ ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದರೂ ಈ ಬಗ್ಗೆ ಸಭೆ ಕರೆಯುವ ಬಗ್ಗೆ ಸೂಚನೆ ನೀಡಿಲ್ಲ ಈಗಲಾದರೂ ಮುಖ್ಯ ಮಂತ್ರಿಗಳು ಸಭೆಯನ್ನು ಕರೆದು ಮುಂದೆ ಏನು ಹೆಚ್ಚು ಇರಬೇಕೆಂದು ಒಂದು ನಿರ್ಧಾರಕ್ಕೆ ಬರಬೇಕು. ಈಗ ನಮ್ಮ ರಾಜ್ಯದ ಮುಖ್ಯಮಂತ್ರಿಗಲು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಸುಪ್ರೀಮ್ ಕೋರ್ಟಿನ ಸಲಹೆ ಬಗ್ಗೆ ಮುಂದಿನ ಮಾತುಕತೆ ಪ್ರಾರಂಭ ಮಾಡಿ ಇರುವ ಸಮಸ್ಯೆಯನ್ನು ಬಗೆಹರಿಸಬೇಕು. ಈ ಬಗ್ಗೆ ಮಾತುಕತೆಗೆ ಚಾಲನೆ ಕೊಡಬೇಕೆಂದು ಹೇಳುತ್ತೇನೆ. ಆ ಮೇಲೆ ಕೃಷ್ಣ ನದಿ ನೀರಿನ ಹಂಚಿಕೆ ಬಗ್ಗೆ ಕೂಡಾ ಹಿಂದೆ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರಪಾಟೀಲರು ಆಂಧ್ರದ ಮುಖ್ಯಮಂತ್ರಿಗಳು ಜೊತೆ ಮಾತುಕತೆ ಮೂಲಕ ಸೌಹಾರ್ದ ವಾತಾವರಣದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ತಿಳಿಸಿದ್ದರು. ಏಕೆಂದರೆ 2000ನೇ ಇಸವಿಯ ಒಳಗೆ ಬಚಾವತ್ ಅವಾರ್ಡ್ ಪ್ರಕಾರ ಅದರಡಿ ಬರುವ ಎಲ್ಲ ಯೋಜನೆಗಳ ಕಾಮಗಾರಿ ಕೆಲಸಗಳನ್ನು ಮುಗಿಸಬೇಕಾಗುತ್ತದೆ.

ಅಷ್ಟರೊಳಗೆ ನಮ್ಮ ಹಣಕಾಸಿನ ಪರಿಸ್ಥಿತಿ ಏನು ಎಂದು ನೋಡಿ ಅದನ್ನು ಬೇಗ ಮುಗಿಸುವ ಬಗ್ಗೆ ಕೂಡಾ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಈ ಸಮಸ್ಯೆ ಬಗೆಹರಿಸುವುದಕ್ಕೆ ದಾರಿ ಮಾಡಬೇಕು. ನಮ್ಮ ಮತ್ತು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಒಂದು ಶೃಂಗಸಭೆ ಸೇರಿ ಅಲ್ಲಿ ತೀರ್ಮಾನಕ್ಕೆ ಬಂದರೆ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಾಗುತ್ತದೆ ಇವತ್ತು ಸುಪ್ರಿಮ್ ಕೋರ್ಟಿನ ಸಲಹೆ ದೊರೆತಿರತಕ್ಕದ್ದು ನಿಜಕ್ಕೂ ಕರ್ನಾಟಕ ಜನತೆಯ ಕನ್ನಡಿಗರ ಧರ್ಮದ ಹೋರಾಟಕ್ಕೆ ದೊರೆತಿರತಕ್ಕ ಜನವೆಂದು ಹೇಳಿ ಈ ಸಲಹೆ ಕೊಡುವುದಕ್ಕಾಗಿ ನಾನು ಸುಪ್ರೀಮ್ ಕೋರ್ಟಿಗೆ ಅಭಿನಂದನೆ ಸಲ್ಲಿಸುತ್ತೇನೆ.

+ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ ಇಡೀ ರಾಷ್ಟ್ರದ ಜಲನೀತಿ ಇನ್ನೂ ತೀರ್ಮಾನ ಆಗದೇ ಇರುವ ಸಂದರ್ಭದಲ್ಲಿ ಸುಪ್ರೀಮ್ ಕೋರ್ಟ್‌ನವರು ಏನು ' ಸಲಹೆಯನ್ನು ಕೊಟ್ಟಿದ್ದಾರೆ ಇದು ನಿಜಕ್ಕೂ ಇಡೀ ರಾಷ್ಟ್ರದ ಜನ ಸ್ವಾಗತ ಮಾಡುವ ಒಂದು ಸಲಹೆಯೆಂದು ನನ್ನ ಭಾವನೆ. ರಾಷ್ಟ್ರದಲ್ಲಿ ಗಡಿ ಮತ್ತು ನೀರಿನ ವಿಚಾರದಲ್ಲಿ ಅನೇಕ ಕಡೆ ತಲೆದೋರಿರುವ ಸಮಸ್ಯೆಗಳನ್ನು ನೋಡಿ ನಾವು ಭಾರತೀಯರು ಹೌದೋ ಅಲ್ಲವೋ ಎನ್ನುವ ಸ್ಥಿತಿಗೆ ಬರುತ್ತಿದ್ದೇವೆ. ಇಂತಹ ಸಮಯದಲ್ಲಿ ರಾಷ್ಟ್ರ ಗೊಂದಲಮಯ ವಾತಾವರಣದಲ್ಲಿರುವಾಗ ಸುಪ್ರೀಮ್ ಕೋರ್ಟ್ ಕೊಟ್ಟಿರತಕ್ಕ ಸಲಹೆ ನಿಜಕ್ಕೂ ದೇಶದಲ್ಲಿ ಏಕತೆಯನ್ನು ತರುವುದಕ್ಕೆ ಅನುಕೂಲವಾಗುತ್ತದೆನ್ನುವುದು ಭಾರತೀಯ ಜನತಾ ಪಕ್ಷದ ಮತ್ತು ನನ್ನ ವೈಯಕ್ತಿಕ ಭಾವನೆ ಎಂದು ಹೇಳುತ್ತೇನೆ. ಇಂತಹ ಸಂದರ್ಭದಲ್ಲಿ ಆ ಸಲಹೆಯನ್ನು ಜಾರಿಗೆ ತರುವುದರ ಬಗ್ಗೆ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳು ಮುಂದೆ ಹೆಜ್ಜೆಯಿಡುವುದರಿಂದ ಇಡೀ ದೇಶದ ಏಕತೆಗೆ ಒಂದು ಬುನಾದಿ ಹಾಕಿದಂತಾಗುತ್ತದೆ. ನಮ್ಮ ಮುಖ್ಯಮಂತ್ರಿಗಳು ಈ ದಿಕ್ಕಿನಲ್ಲಿ ಅತಿ ಹೆಚ್ಚು ವೇಗದಲ್ಲಿ ಕಾರ್ಯೋನ್ಮುಖರಾಗಬೇಕು. ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಜಲ ನೀತಿ ಬಗ್ಗೆ ಮುಂದೆ ಬಂದರೆ ರಾಷ್ಟ್ರದ ಏಕತೆಗೂ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ ಎಂದು ಹೇಳಿ ಸುಪ್ರೀಮ್ ಕೋರ್ಟ್‌ನಿಂದ ಏನು ಸಲಹೆ ಬಂದಿದೆ ಆ ದಿಕ್ಕಿನಲ್ಲಿ ನಮ್ಮ ಮುಖ್ಯಮಂತ್ರಿಗಳು ಹೆಚ್ಚಿನ ರೀತಿಯಲ್ಲಿ

ಪ್ರಯತ್ನ ಮಾಡಲಿ ಎಂದು ಹಾರೈಸಿ ನಾನು ಭಾರತೀಯ ಜನತಾ ಪಕ್ಷದ ಪರವಾಗಿ ಸುಪ್ರೀಮ್ ಕೋರ್ಟಿನ ಸಲಹೆಯನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರಗಳು ಬದಲಾವಣೆಗಳಾಗಿವೆ. ಮೊದಲು ಕಾಂಗ್ರೆಸ್ ಸರ್ಕಾರವಿತ್ತು. ಆಮೇಲೆ ಜನತಾ ಸರ್ಕಾರ ಅಧಿಕಾರದಲ್ಲಿತ್ತು ಪುನಃ ಕಾಂಗ್ರೆಸ್ ಸರ್ಕಾರ ಈಗ ಅಧಿಕಾರಕ್ಕೆ ಬಂದಿದೆ. ಸರ್ಕಾರಗಳು ಬದಲಾವಣೆ ಆಗಿದ್ದರೂ ಸಹ ನೀರು ಹಂಚಿಕೆ ವಿಚಾರದಲ್ಲಿ ಸ್ಪಷ್ಟವಾದಂತಹ ನಿಲುವು ತಳೆದಿರತಕ್ಕದ್ದು ಇವತ್ತು ನಮ್ಮ ಮುಂದಿದೆ. ಆ ನಿಲುವು ಏನೆಂದರೆ ಅಕ್ಕಪಕ್ಕದ ರಾಜ್ಯಗಳು ಮಧುರ ವಾತಾವರಣದಲ್ಲಿ ಇರಬೇಕಾಗುತ್ತದೆ. ಆ ಮಧುರವಾದ ವಾತಾವರಣದಲ್ಲಿ ಕೊಟ್ಟು ಮತ್ತು ತೆಗೆದುಕೊಳ್ಳುವಂತಹ ಒಂದು ನೀತಿಯನ್ನು ಅನುಸರಿಸಿ ನದಿ ನೀರಿನ ಹಂಚಿಕೆ ಆಗಬೇಕೆನ್ನುವ ಕರ್ನಾಟಕದ [illegible]ದ ಏನಿತ್ತು ಅದು ಇವತ್ತಿನ ದಿವಸ ಸರ್ವೋಚ್ಚ ನ್ಯಾಯಾಲಯದಲ್ಲೂ ಕೂಡ ಪ್ರತಿಬಿಂಬವಾಗಿದೆ. ಸರ್ವಪಕ್ಷಗಳ ನಿಯೋಗವನ್ನು ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ಅವರ ಮುಂದೆ ಹೋದಾಗ ಇದೇ ಮಾತನ್ನು ಹೇಳಿದ್ದೇವೆ. ಸಂಬಂಧಪಟ್ಟ ರಾಜ್ಯಗಳಾದ ತಮಿಳುನಾಡು ಕೇರಳ, ಕರ್ನಾಟಕ ಮತ್ತು ಪಾಂಡಿಚೇರಿ ರಾಜ್ಯಗಳವರನ್ನು ಕರೆದು ಒಂದು ಮಧುರವಾದ ವಾತಾವರಣದಲ್ಲಿ ಇದನ್ನು ಬಗೆಹರಿಸಿ ಎನ್ನತಕ್ಕ ಬೇಡಿಕೆಯನ್ನು ಇಟ್ಟಿದ್ದೆವು ಅದು ನಾನಾ ಕಾರಣಗಳಿಂದ ಈಡೇರಲಿಲ್ಲ ಆಗ ಏಕಪಕ್ಷೀಯ ವಾದ ತಿರ್ಮಾನವನ್ನು ಕೇಂದ್ರಸರ್ಕಾರ ತೆಗೆದುಕೊಂಡಿತ್ತು. ಅದರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಇವ್ತೊತ್ತಿನ ದಿವಸ ಟ್ರಿಬ್ಯುನಲ್ ರಚನೆಯಾಗಿದೆ. ಎರಡೂ ರಾಜ್ಯಗಳ ಒಟ್ಟಾಭಿಪ್ರಾಯಕ್ಕಾಗಲಿ ಅಥವಾ ಎರಡೂ ರಾಜ್ಯಗಳ ಮಧುರ ಸಂಬಂಧಕ್ಕಾಗಲಿ ಧಕ್ಕೆ ಬರತಕ್ಕ ರೀತಿಯಲ್ಲಿ ಇಲ್ಲಿಯವರೆಗೆ ನಡವಳಕೆಗಳು ನಡೆದಿದೆ. ಇನ್ನುಮುಂದಾದರೂ ಆ ದಾರಿಯನ್ನು ಬಿಡಬೇಕು ಎರಡೂ ರಾಜ್ಯಗಳು ಘರ್ಷಣೆಯ ಹಾದಿಯನ್ನು ಬಿಟ್ಟು ಸಂಬಂಧಪಟ್ಟ ರಾಜ್ಯಗಳವರು ಒಂದು ಕಡೆ ಕುಳಿತು ಚರ್ಚೆಮಾಡಿ ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಮಾರ್ಗದರ್ಶನ ಸಿಕ್ಕಿದೆ. ಇದನ್ನು ನಮ್ಮ ಸರ್ಕಾರ ಉಪಯೋಗಿಸಿಕೊಳ್ಳುವುದು ಅತಿ ಅವಶ್ಯಕತೆಯಿದೆ. ಇದನ್ನು ನಾನು ಸ್ವಾಗತ ಮಾಡಿ ನಮ್ಮ ಸರ್ಕಾರ ಇವತ್ತಿನ ದಿವಸ ಇದಕ್ಕೆ ಮುಂದಾಗಬೇಕು, ಇತರೆ ರಾಜ್ಯಗಳ ಜೊತೆಯಲ್ಲಿ ಸಂಪರ್ಕವನ್ನು ಬೆಳೆಸಿ ಮಧುರ ವಾತಾವರಣದಲ್ಲಿ ಒಳ್ಳೆಯ ರೀತಿಯಲ್ಲಿ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಭಾರದ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

+ ಪ್ರೊ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ) : ಸನ್ಮಾನ್ಯ ಸಭಾಧ್ಯಕ್ಷರೆ ಮಾನ್ಯ ವಾಟಾಳ್ ನಾಗರಾಜ್‌ರವರು ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಹಾಗೆ ಸರ್ವೋಚ್ಚ ನ್ಯಾಯಾಲಯ ಒಂದು ಸಲಹೆ ಮಾಡಿದೆ ಅದರ ಬಗ್ಗೆ ಚರ್ಚೆಯಾಗುತ್ತಿದೆ. ನೀವು ಬಂದು ಮಾತನಾಡಬೇಕೆಂದು ಹೇಳಿದ್ದರಿಂದ ನಾನು ಸದನದ ಒಳಗಡೆ ಬಂದೆ. ವಾದ ವಿವಾದ ಇನ್ನೂ ನಡೆಯುತ್ತಿದೆ ಆ ನಡುವೆ ಸರ್ವೋಚ್ಚ ನ್ಯಾಯಾಲಯ ಈ ಸಲಹೆ ಮಾಡಿದೆ ಇದನ್ನು ನಾನು ಸ್ವಾಗತಿಸುತ್ತಾ ಮಾನ್ಯ ವಾಟಾಳ್‌ನಾಗರಾಜ್‌ರವರಿಂಧ ನನ್ನ ಮಾನ್ಯ ಗೆಳೆಯರಿಗೆ ನಾನು ಸಲಹೆ ಮಾಡುವುದು ಏನೆಂದರೆ ಎಲ್ಲಾ ವಿಷಯಗಳ ಬಗ್ಗೆ ನಾವು ಇದೇ ಒಂದು ವಿಧಾನವನ್ನು ನಾವು ಅಳವಡಿಸಿಕೊಳ್ಳಬೇಕು. ನಿನ್ನೆ ತಾನೇ ನಾನು ಮಾತನಾಡಲಿಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ ನಿನ್ನೆ ತಾನೇ ತಮಿಳು ಸಂಘದವರು ನನ್ನನ್ನು ಆಹ್ವಾನ ಮಾಡಿದ್ದರು. ನನ್ನನ್ನು ಅವರು ಆಹ್ವಾನ ಮಾಡಿದ್ದರ ಉದ್ದೇಶವೇನೆಂದರೆ ಕರ್ನಾಟಕ

ರಾಜ್ಯದ ಮಾಜಿ ಮುಖ್ಯಮಂತ್ರಿಗಳೂ ಹಿರಿಯ ರಾಜಕಾರಣಿಗಳೂ ಆದ ಸನ್ಮಾನ್ಯ ಶ್ರೀ ನಿಜಲಿಂಗಪ್ಪನವರ ಭಾವಚಿತ್ರದ ಅನಾಹರಣಕ್ಕಾಗಿ ಆ ಸಂದರ್ಭದಲ್ಲಿ ನಾನು ಮಾತನಾಡುತ್ತಾ ನಾನು ತಮಿಳು ಮಾತನಾಡುವ ಕನ್ನಡಿಗರಿಗೆ ವಿನಂತಿ ಮಾಡಿದೆ. ಪರಸ್ಪರ ಸಂಭಾಷಣೆಯ ಮೂಲಕ ಒಂದು ಮಧುರ ವಾತಾವರಣದಲ್ಲಿ ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ಇರುವಂತಹ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸಾಧ್ಯತೆ ಉಂಟೆಂದು ಹೇಳಿದ್ದೇನೆ.

ನನ್ನ ಹಿರಿಯ ಮಿತ್ರರು ಹಿಂದೆ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು. ಅವರು ಹಿಂದೆ ತಮಿಳುನಾಡಿನಿಂದ ಇಲ್ಲಿ ಬಂದು ವಾಸ ಮಾಡುತ್ತಿರುವವರೂ ಅವರು ಬೆಂಗಳೂರು ನಗರವನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಬೇಕೆಂದು ನನ್ನ ಹಳೆಯ ಮಿತ್ರರು ಕೇಳಿದ್ದರು. ಸನ್ಮಾನ್ಯ ಸಭಾಧ್ಯಕ್ಷರಿಗೂ ಅವರ ಪರಿಚಯ ಉಂಟು ಅವರು ಪ್ರೊಫೆಸರ್ ಧರ್ಮಲಿಂಗಂರವರು ನಾನು ಅಲ್ಲಿ ನೆರೆದಿದ್ದಂತ ತಮಿಳರನ್ನು ಕೇಳಿದೆ ತಾವು ಈ ಹೇಳಿಕೆಯನ್ನು ಒಪ್ಪುತ್ತೀರಾ ಎಂದು? ಅಲ್ಲಿನ ಪ್ರತಿ ಯೊಬ್ಬರೂ ನಾವು ಒಪ್ಪುವುದಿಲ್ಲವೆಂದು ಹೇಳಿದರು ಆ ಸಂದರ್ಭದಲ್ಲಿ ನಾನು ಕಾವೇರಿ ನೀರಿನ ವಿವಾದದ ಬಗ್ಗೆ ಪ್ರಸ್ತಾಪ ಮಾಡಿ ಅಲ್ಲಿನ ತಮಿಳರ ಜೊತೆಯಲ್ಲಿ ಮಾತನಾಡಿದೆ. ಕಾವೇರಿ ನದಿಯಲ್ಲಿ ಸಾಕಷ್ಟು ನೀರಿದೆ. ಅದನ್ನು ಎರಡೂ ರಾಜ್ಯಗಳು ವೈಜ್ಞಾನಿಕವಾಗಿ ಉಪಯೋಗಿಸಿದರೆ ಎರಡೂ ರಾಜ್ಯಗಳ ನೀರಾವರಿ ಅವಶ್ಯಕತೆಗೆ ಧಕ್ಕೆ ಬರದೇ ಇರುವ ರೀತಿಯಲ್ಲಿ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಬಹುದು. ನಾವು ಕರ್ನಾಟಕದವರು ವೈಜ್ಞಾನಿಕವಾಗಿ ಉಪಯೋಗಿಸುತ್ತಿಲ್ಲ ತಮಿಳುನಾಡಿನವರೂ ವೈಜ್ಞಾನಿಕವಾಗಿ ಉಪಯೋಗಿಸುತ್ತಿಲ್ಲ. ಅದರಲ್ಲೂ ವಿಶೇಷವಾಗಿ ತಮಿಳುನಾಡಿನಲ್ಲಿ ನೀರು ಪೋಲಾಗುತ್ತಿದೆ. ಇದನ್ನು ತಡೆಯುವುದರ ಬಗ್ಗೆ ನಾವು ನೀವು ಮಾತನಾಡಿ ಇದನ್ನು ಬಗೆಹರಿಸಿಕೊಳ್ಳಬಹುದು. ಕಾವೇರಿ ನೀರಿನ ವಿಷಯದಲ್ಲಿ ರಾಜಕಾರಣ ಮಾಡಬಾರದು. ಶ್ರೀ ಅಣ್ಣಾದೊರೈ ಕಾಲವಾದ ನಂತರ ಬಂದ ಪ್ರತಿಯೊಬ್ಬ ಮುಖ್ಯಮಂತ್ರಿ ಕೂಡ ಇದನ್ನು ತಮ್ಮ ರಾಜಕಾರಣಕ್ಕೆ ಉಪಯೋಗಿಸಿಕೊಂಡಿದ್ದಾರೆ ಇದನ್ನು ಕೈಬಿಡೋಣ ಎಂಬ ಮಾತನ್ನು ಹೇಳಿದಾಗ ತಮಿಳುನಾಡಿನ ಜನ ಇದಕ್ಕೆ ಸಂಪೂರ್ಣರಾಗಿ ಒಪ್ಪಿಗೆಯನ್ನು ಕೊಟ್ಟರು. ಆ ಕಾರಣ, ಸುಪ್ರೀಂಕೋರ್ಟಿನ ಸಲಹೆಯನ್ನು ಸ್ವಾಗತ ಮಾಡುವುದರ ಜೊತೆಗೆ ಸನ್ಮಾನ್ಯ ವಾಟಾಳ್ ನಾಗರಾಜ್ ಅವರಂಥ ಮಿತ್ರರಿಗೆ ನನ್ನ ವೈಯಕ್ತಿಕ ವಿನಂತಿ ಏನೆಂದರೆ ಅದು ತಿರುವಳ್ಳುವರ್ ಪ್ರತಿಮೆ ಇರಬಹುದು ಅಥವಾ ಕಾವೇರಿ ನೀರು ಇರಬಹುದು ಅಥವಾ ಬೆಂಗಳೂರು ನಗರವನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಣೆ ಮಾಡುವ ವಿಚಾರ ಇರಬಹುದು. ಎಲ್ಲವನ್ನೂ ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ ಈ ಒಂದು ಕಾವೇರಿ ಜಲ ವಿವಾದದ ಬಗ್ಗೆ ವಿರೋಧಪಕ್ಷದವರು ಮತ್ತು ಸರ್ಕಾರ ಎಲ್ಲರೂ ಒಂದೇ ಅಭಿಪ್ರಾಯವನ್ನು ಪಡೆದಿದ್ದೇವೆ. ಇದರಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲ. ಮತ್ತು ಸರ್ಕಾರದ ನಿಲುವು ಮೊದಲಿನಿಂದಲೂ ಕೂಡ ಏನಿದೆಯೆಂದರೆ ತಮಿಳುನಾಡು ಕರ್ನಾಟಕ ಕೇರಳ ಮತ್ತು ಪಾಂಡಿಚೇರಿ ಈ ನಾಲ್ಕೂ ರಾಜ್ಯಗಳು ಸೇರಿ ಪರಸ್ಪರ ಮಾತುಕತೆಯಿಂದ ಈ ಪ್ರಶ್ನೆಯನ್ನು ಬಗೆಹರಿಸಬೇಕು ಎನ್ನತಕ್ಕದ್ದಾಗಿದೆ. ನಮ್ಮದು ಮೊದಲಿನಿಂದಲೂ ಈ ನಿಲುವು ಇದೆ. ಹಿಂದಿನ ಸರ್ಕಾರ ಕೂಡ ಇದೇ ನಿಲುವನ್ನು ತಳೆದಿತ್ತು ಇವತ್ತು ಕೂಡ ನಮ್ಮ ಸರ್ಕಾರ ಇದೇ ನಿಲುವನ್ನು ತಾಳಿದೆ. ಮತ್ತು ತಾವು ಕೂಡ ಅದಕ್ಕೆ ಬೆಂಬಲ ಸೂಚಿಸಿದ್ದೀರಿ. ಈ ಪ್ರಶ್ನೆ ಮತ್ತೆ ಬಂದಾಗ ಟ್ರಿಬ್ಯೂನಲ್ ಏಕಪಕ್ಷೀಯವಾಗಿ ಅವಾರ್ಡ್ ಕೊಟ್ಟಮೇಲೆ ಈ ಪ್ರಶ್ನೆ ಪುನಃ ಉದ್ಭವಿಸಿತ್ತು

ನಮ್ಮ ಅನಿಸಿಕೆ ಏನು ಇತ್ತು ಅದೇ ಸಲಹೆಯನ್ನು ಇವತ್ತು ಸುಪ್ರೀಂ ಕೋರ್ಟಿನಲ್ಲಿ ಮಾಡಿದ್ದಾರೆ.

ಅದನ್ನು ಈಗಾಗಲೇ ಮುಖ್ಯಮಂತ್ರಿಗಳು ಸ್ವಾಗತ ಮಾಡಿದ್ದಾರೆ. ಅದೇರೀತಿಯಾಗಿ ತಾವು ಕೂಡ ಸ್ವಾಗತವನ್ನು ಕೋರಿದ್ದೀರಿ. ಅದಕ್ಕೆ ಈಗ ತಕ್ಷಣ ಕರೆಸಿ ಮಾತನಾಡಬೇಕು ಎನ್ನವುದರ ಬಗ್ಗೆ ಶ್ರೀ ವಾಟಾಳ್ ನಾಗರಾಜ್ ಅವರು ಶ್ರೀ ಸಿಂಧ್ಯಾ ಅವರು ಇನ್ನೂ ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯವರಿಗೆ ಇದರ ಬಗ್ಗೆ ತಿಳಿಸುತ್ತೇನೆ. ಇದರ ಬಗ್ಗೆ ಅವರು ಕ್ರಮ ತೆಗೆದುಕೊಂಡು ತಮ್ಮ ಸಲಹೆ ಪಡೆದೇ ಮುಂದೆ ಹೋಗುತ್ತಾರೆ. ಏಕೆಂದರೆ ಅನೇಕ ಸಲ ಇಂತಹ ಸಮಸ್ಯೆ ಬಂದಾಗ ತಮ್ಮ ಜತೆ ಚರ್ಚೆ ಮಾಡಿದ್ದಾರೆ ಕರೆಸಿದ್ದಾರೆ ಮಾತನಾಡಿದ್ದಾರೆ. ಕೇಂದ್ರಸರ್ಕಾರಕ್ಕೆ ಮೆಮೊರೇಂಡಮ್ ಕೊಡುವಾಗಲೂ ಸಹ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇನೇ ಅವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಇವತ್ತು ನಾವು ಆರ್ಡಿನೆನ್ಸ್ ಮಾಡಬೇಕಾದರೂ ಕೂಡ ತಮ್ಮೆಲ್ಲರ ಬೆಂಬಲದಿಂದ ವಿಶ್ವಾಸದಿಂದ ಮತ್ತು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅದನ್ನು ಮಾಡಿದ್ದು ಇನ್ನು ಮುಂದಾದರೂ ಕೂಡ ತಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎನ್ನತಕ್ಕಂಥ ಮಾತನ್ನು ಪುನಃ ತಮ್ಮ ಮೂಲಕ ಅವರಿಗೆ ಹೇಳುತ್ತೇನೆ ನ್ನನ್ನ ಅನಿಸಿಕೆಯನ್ನು ಹೇಳಿದ್ದೇನೆ.

ಅಧ್ಯಕ್ಷರು : ಭಾವನಾತ್ಮಕವಾಗಿ ನಮ್ಮ ಮೂರು ರಾಜ್ಯಗಳನ್ನು ಸಂಘರ್ಷದ ಹಾದಿಗೆ ಕೊಂಡೊಯ್ಯುತ್ತಿರುವ ಈ ಕಾವೇರಿ ಜಲ ವಿವಾದದ ಬಗ್ಗೆ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯ ಮಾಡಿರುವ ಸಲಹೆಯನ್ನು ಸದನದ ಎಲ್ಲ ಭಾಗಗಳು ಸ್ವಾಗತಿಸಿರತಕ್ಕದ್ದು ಬಹಳ ಅರ್ಥಪೂರ್ಣವಾಗಿದೆ. ಅಂತರರಾಜ್ಯ ವಿವಾದಗಳಿಲ್ಲವನ್ನೂ ಕೂಡ ನೇರ ಸಂಧಾನ ಮತ್ತು ಮಾತುಕತೆಗಳಿಂದ ಬಗೆಹರಿಸಬೇಕು. ಅಂಥಾದರಲ್ಲಿ ರಾಜಕೀಯ ಮುತ್ಸದ್ದಿತನ ಇದೆ ಔಚಿತ್ಯ ಇದೆ. ಮತ್ತು ಈ ದೇಶದ ಅವಶ್ಯಕತೆಗಳಲ್ಲಿ ಅದು ಬಹಳ ಪ್ರಾಮುಖ್ಯವಾದದ್ದು ತಮಿಳುನಾಡು ಮತ್ತು ಕರ್ನಾಟಕ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಕನ್ಸಿಸ್ಟೆಂಟ್ ಆಗಿ ಒಂದು ನಿಲುವನ್ನು ತೆಗೆದುಕೊಂಡಿದೆ ಹಿಂದಿನ ಮುಖ್ಯಮಂತ್ರಿಗಳು ಮತ್ತು ಈಗಿನ ಮುಖ್ಯಮಂತ್ರಿಗಳು ಈ ಕಾವೇರಿ ವಿವಾದದ ಎಲ್ಲ ಪ್ರಾಕಾರಗಳನ್ನು ಕೂಡ ನೇರವಾಗಿ ತಮಿಳುನಾಡು ಮತ್ತು ಪಾಂಡಿಚೇರಿ ಜೊತೆಯಲ್ಲಿ ಮಾತನಾಡಿದ್ದಾರೆ ಅದನ್ನು ಬಗೆಹರಿಸಬೇಕು ಎನ್ನತಕ್ಕಂಥ ಬೆಂಬಲದಿಂದ ಕರ್ನಾಟಕ ಯಾವತ್ತೂ ಹಿಂದೆ ಹೋಗಿಲ್ಲ. ಈ ದಿವಸ ಮತ್ತೆ ಈ ಸದನ ಒಟ್ಟಾರೆ ಸದಭಿಪ್ರಾಯವನ್ನು ವ್ಯಕ್ತಪಡಿಸುತ್ತಿದೆ. ಈಗಾಗಲೇ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸಭಾನಾಯಕರು ಇದನ್ನು ಸ್ವಾಗತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಮಿಳುನಾಡು ಮತ್ತು ಪಾಂಡಿಚೇರಿ ರಾಜ್ಯಗಳು ಕೂಡ ಇದರ ಬಗ್ಗೆ ಇಂಥದ್ದೇ ಗಂಭೀರ ಮತ್ತು ರಚನಾತ್ಮಕ ಆಲೋಚನೆಯನ್ನು ಮಾಡುತ್ತವೆ ಎಂದು ಸಭೆಯ ಪರವಾಗಿ ನಾನು ನಿರೀಕ್ಷೆ ಮಾಡುತ್ತೇನೆ ಮತ್ತು ಹಾರೈಸುತ್ತೇನೆ.

ವಿಷಯ : ಎಸ್.ಎಸ್.ಎಲ್.ಸಿ. ಪರೀಕ್ಷೆ ಶುಲ್ಕವನ್ನು ಹೆಚ್ಚು ಮಾಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ಕೆ.ಎಸ್ ಈಶ್ವರಪ್ಪ : ಇವತ್ತು ಬೆಳಿಗ್ಗೆ ತಾನೆ ನಾನು ಪ್ರಸ್ತಾಪ ಮಾಡಿದ್ದೇನೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕದ ವಿಚಾರದಲ್ಲಿ ಸರ್ಕಾರದಿಂದ ಒಂದು ಹೇಳಿಕೆ ಬಂದರೆ ತುಂಬಾ ಅನುಕೂಲ ಏಕೆಂದರೆ ಇದರಿಂದ ಇಡೀ ರಾಜ್ಯಕ್ಕೆ ತುಂಬ ತೊಂದರೆಯಾಗುತ್ತಿದೆ.